

ಯಾವುದೇ ವಿನ್ಯಾಸದ, ಶೈಲಿಯ ಪ್ಯಾಂಟ್ ಮೇಲೆ, ಸ್ಕರ್ಟ್ ಮೇಲೆ ಚೆನ್ನಾಗಿ ಹೊಂದಿಕೆಯಾಗುವ ಕೇಪ್ ಟಾಪ್ ಈಗ ಟಾಪ್ ಫ್ಯಾಷನ್ ಟ್ರೆಂಡ್‌ನಲ್ಲಿದೆ. ಯುವತಿಯರನ್ನು ಸೆಳೆಯುವ ಕೇಪ್ ಟಾಪ್ ಸಿನಿತಾರೆಯರ ಮೆಚ್ಚು.

■ ಯು. ಅನಂತ್

# ಟಾಪ್ ಟ್ರೆಂಡ್‌ನಲ್ಲಿ ಕೇಪ್ ಟಾಪ್

ಆಧುನಿಕ ಮನೋಭಾವದ ಹುಡುಗಿಯರ ಮನಮೋಹಕ ಮಾಡ್ ಉಡುಗೆಗಳಲ್ಲಿ 'ಕೇಪ್ ಟಾಪ್' ಕೂಡ ಒಂದು. ಜೀನ್ಸ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್, ಸ್ಕರ್ಟ್ ಮೇಲೆ ಧರಿಸುವ ಈ ಕೇಪ್ ಟಾಪ್ ಸದ್ಯಕ್ಕೆ ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡಿಂಗ್‌ನಲ್ಲಿದೆ. ಈಗೀಗ ಯುವತಿಯರು ಕೇಪ್ ಟಾಪ್ ಅನ್ನೇ ಹೆಚ್ಚು ಧರಿಸುತ್ತಿದ್ದಾರೆ.

ಕೇಪ್ ಟಾಪ್ ಒಂದು ರೀತಿಯ ಫ್ಯೂಷನ್ ಉಡುಪು. ವಿದೇಶಗಳಲ್ಲಿ ಫ್ಯಾಷನ್ ಆಗಿದ್ದ ಕೇಪ್‌ಟಾಪ್ ನಮ್ಮ ದೇಶದಲ್ಲೂ ಮೆಲ್ಲನೆ ಅಡಿ ಇಟ್ಟಿರುವುದಲ್ಲದೆ ನಮ್ಮ ಉಡುಪುಗಳ ಜೊತೆಗೆ ಚೆನ್ನಾಗಿ ಹೊಂದಿಕೊಂಡಿದೆ. ಹಿಂದೆ ಮೈಅಳತೆಗೆ ಸರಿದೂಗುವ ಕೆಲವೇ ವಿಧದ ಪ್ಯಾಂಟ್‌ಗಳಿದ್ದವು. ಆಮೇಲೆ ಹುಡುಗಿಯರು ಧರಿಸುವ ಪ್ಯಾಂಟ್‌ನಲ್ಲಿ ಥರಾವರಿ ವಿನ್ಯಾಸಗಳು ಬಂದವು. ಪಲಾಜೊ, ದೊಗಳೆ ಪ್ಯಾಂಟ್‌ಗಳು, ಲೆಗ್ಗಿಂಗ್‌ಗಳು ಬಂದು, ಇವುಗಳ ಮೇಲೆ ಕೇಪ್ ಟಾಪ್ ಅನ್ನು ಸುಲಭವಾಗಿ ಧರಿಸಿಕೊಂಡು ಕಾಲೇಜು ಹುಡುಗಿಯರು, ಯುವತಿಯರು ಸ್ಟೈಲಿಷ್ ನಡೆಯಲ್ಲಿ ಮಿಂಚತೊಡಗಿದ್ದಾರೆ.

ಪ್ಯಾಂಟ್ ಮೇಲೆ ಸಡಿಲವಾದ ಶರ್ಟ್ ಧರಿಸುವುದು ಕೂಡ ಲೇಟೆಸ್ಟ್ ಫ್ಯಾಷನ್. ಇದು ಒಂದು ಬಗೆಯ ಕೇಪ್ ಟಾಪ್ ಎನಿಸಿಕೊಂಡು ಸುದ್ದಿ ಮಾಡುತ್ತಿದೆ. ಯುವತಿಯರ ಅಷ್ಟೇ ಏಕೆ ವಯಸ್ಸಾದ ಮಹಿಳೆಯರು ಕೂಡ 'ಯಂಗ್ ಲುಕ್' ಪಡೆಯಲು ಕೇಪ್ ಟಾಪ್ ಅನ್ನೇ ನೆಚ್ಚಿಕೊಂಡಿದ್ದಾರೆ.

ಒಂದು ಶರ್ಟ್ ಅಥವಾ ಅಂಗಿಯ ಮೇಲೆ ಕೋಟ್ ತರ ತೊಡುವ ಟಾಪ್‌ಗಳೂ ಫ್ಯಾಷನ್ ಆಗಿವೆ. ಇದನ್ನೇ ಕೇಪ್ ಟಾಪ್ ಎಂದು ಪಾಶ್ಚಾತ್ಯ ಶೈಲಿಯಲ್ಲಿ ಹೆಸರಿಟ್ಟಿದ್ದು, ನಮ್ಮಲ್ಲೂ ಅದೇ ಹೆಸರಿನಲ್ಲಿ ತರಾವರಿ ಟಾಪ್‌ಗಳು ಜನಪ್ರಿಯವಾಗಿದೆ. ಮೊದಲೆಲ್ಲ ಸಾಂಪ್ರದಾಯಿಕ ಶೈಲಿಯಲ್ಲೇ ಇದ್ದ ಟಾಪ್ ಇದೀಗ ಹಲಬಗೆಯ ವಿನ್ಯಾಸ, ಆಕರ್ಷಕ ಬಣ್ಣ, ಸೀಕ್ವೆನ್ಸ್, ಪ್ರಿಂಟ್ಸ್, ಫ್ಲೋರಲ್ ಡಿಸೈನ್‌ಗಳಿಂದ ಗಮನಸೆಳೆಯುತ್ತಿದೆ.

ಸಾಮಾನ್ಯವಾಗಿ ಸಿನಿತಾರೆಯರು ಏನೇ ಹೊಸತು ಉಡುಪು ತೊಟ್ಟುಕೊಂಡರೂ ಅದು ಫ್ಯಾಷನ್ ಜಗತ್ತಿನಲ್ಲಿ